ಕರ್ನಾಟಕ ಸರ್ಕಾರ

**ಬೆಂಗಳೂರು ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆ**

[ಕರ್ನಾಟಕ ಸರ್ಕಾರದಒಂದು ಸ್ವಾಯತ್ತ ಸಂಸ್ಥೆ]

ಕೆ. ಆರ್. ರಸ್ತೆ, ಕೋಟೆ, ಬೆಂಗಳೂರು – 560 002.

☎: 080–2670 0810, 🖷: 080–2670 4342.

ಇಮೇಲ್:director_bmcri@yahoo.co.in / director_dean@bmcri.orgಅಂತರ್ಜಾಲ: www.bmcri.org

ನಿರ್ದೇಶಕರು ಹಾಗೂ ಡೀನ್‌ರವರಕಾರ್ಯಾಲಯ

ಸಂಖ್ಯೆ: ಬೆಂವೈವಿಸಂಸಂಸಂ/ಸಿ(1)79/2014–15 ಬೆಂಗಳೂರು, ದಿನಾಂಕ:06.05.2015

# ಅಧಿಸೂಚನೆ

ಬೆಂಗಳೂರು ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆಯ ಮತ್ತು ಇದರ ವ್ಯಾಪ್ತಿಗೆ ಬರುವ ಆಸ್ಪತ್ರೆಗಳ ರೇಡಿಯೋ ಡಯಾಗ್ನಾಸಿಸ್ ವಿಭಾಗದಲ್ಲಿನ ಪ್ರಾಧ್ಯಾಪಕರ ಹುದ್ದೆಗೆ ಅರ್ಹ ಅಭ್ಯರ್ಥಿಗಳಿಂದ ನೇರ ಸಂದರ್ಶನದ ಮೂಲಕ ಭರ್ತಿ ಮಾಡಲು ಅರ್ಜಿ ಆಹ್ವಾನಿಸಲಾಗಿದೆ.

ನೇರ ಸಂದರ್ಶನದ ಪೂರ್ವಭಾವಿಯಾಗಿ ಎಸ್.ಎಸ್.ಎಲ್.ಸಿ ಅಥವಾ ಸಮಾನಾಂತರ ಪರೀಕ್ಷೆಯಲ್ಲಿ ಕನ್ನಡವನ್ನು ಪ್ರಥಮ, ದ್ವಿತೀಯ ಅಥವಾ ತೃತಿಯ ಭಾಷಯನ್ನಾಗಿ ತೆಗೆದುಕೊಂಡು ತೇರ್ಗಡೆಯಾಗದಿರುವ ಅಭ್ಯರ್ಥಿಗಳಿಗೆ ಮಾತ್ರ ಕಡ್ಡಾಯವಾಗಿ ಕನ್ನಡ ಭಾಷಾ ಪರೀಕ್ಷೆಯನ್ನು ನಡೆಸಲಾಗುವುದು. ಈ ಪರೀಕ್ಷೆಯಲ್ಲಿ ಉತ್ತೀರ್ಣರಾದ ಅಭ್ಯರ್ಥಿಗಳು ಮಾತ್ರ ಸಂದರ್ಶನಕ್ಕೆ ಅರ್ಹರಾಗುವರು.

| | |
|---|---|
| ನೇರ ಸಂದರ್ಶನ ದಿನಾಂಕ | 23.05.2015 (ಶನಿವಾರ) |
| ನೋಂದಣಿ | ಬೆಳಗ್ಗೆ 9 ರಿಂದ 11 ಗಂಟೆಯವರೆಗೆ |
| ದಾಖಲೆ ಪರಿಶೀಲನೆ | ಬೆಳಗ್ಗೆ 10 ಗಂಟೆಯಿಂದ ಪ್ರಾರಂಭ |
| ಕನ್ನಡ ಪರೀಕ್ಷೆ (ಅವಶ್ಯವಿದ್ದರೆ) | ಬೆಳಗ್ಗೆ 11 ರಿಂದ 2 ಗಂಟೆಯವರೆಗೆ |
| ನೇರ ಸಂದರ್ಶನ | ಮಧ್ಯಾಹ್ನ 2 ಗಂಟೆಯಿಂದ ಪ್ರಾರಂಭ |
| ನೇರ ಸಂದರ್ಶನ ನಡೆಸುವಸ್ಥಳ | ಹೊಸ ಪರೀಕ್ಷಾ ಸಭಾಂಗಣ, ಬೆಂಗಳೂರು ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆ, ಕೋಟೆ, ಬೆಂಗಳೂರು. |

"ವಯಸ್ಸು ಮತ್ತು ವಯಸ್ಸಿನ ಮಿತಿಯ ಸಡಿಲಿಕೆಯನ್ನು ಕರ್ನಾಟಕ ರಾಜ್ಯ ಸರ್ಕಾರದ ಸಂಬಂಧಿತ ನಿಯಮಗಳಂತೆ ನಿರ್ಧರಿಸಲಾಗುವುದು".

ಈ ಹುದ್ದೆಗಳನ್ನು ತುಂಬುವಾಗ ರಾಜ್ಯ ಸರ್ಕಾರದ ಜಾರಿಯಲ್ಲಿರುವ ಮೀಸಲಾತಿ ನೀತಿಯನ್ನು ಪಾಲಿಸಲಾಗುವುದರಿಂದ ಅಭ್ಯರ್ಥಿಗಳು ಇತ್ತೀಚಿನ ಜಾತಿ, ಆದಾಯ ಪ್ರಮಾಣ ಪತ್ರಗಳನ್ನು ಕಡ್ಡಾಯವಾಗಿ ಸಲ್ಲಿಸತಕ್ಕದ್ದು.

ಹುದ್ದೆಗಳನ್ನು ಕರ್ನಾಟಕ ಸರ್ಕಾರದ ಮೀಸಲಾತಿ ನಿಯಮಾವಳಿಗಳ ಅನ್ವಯ ಕೆಳಕಂಡಂತೆ ವರ್ಗೀಕರಣ ಮಾಡಲಾಗಿದೆ.

| ಕ್ರ ಸಂ. | ಹುದ್ದೆಗಳು | ಹುದ್ದೆಗಳ ಸಂಖ್ಯೆ | ಪ.ಜಾ | ಪ.ಪಂ | ಪ್ರವ–I | ಪ್ರವ–II ಎ | ಪ್ರವ–II ಬಿ | ಪ್ರವ–III ಎ | ಪ್ರವ–III ಬಿ | ಸಾ.ಅ |
|---|---|---|---|---|---|---|---|---|---|---|
| 1 | ಪ್ರಾಧ್ಯಾಪಕರು | 1 | 1 | – | – | – | – | – | – | – |

ಭರ್ತಿ ಮಾಡಲು ಉದ್ದೇಶಿಸಿರುವ ಈ ಮೇಲ್ಕಂಡ ಹುದ್ದೆಗೆ ಸಂಬಂಧಿಸಿದಂತೆ ವಿದ್ಯಾರ್ಹತೆ, ಅನುಭವ, ವಯಸ್ಸಿನ ಮಿತಿ, ಮೀಸಲಾತಿ, ಆಯ್ಕೆ ಪ್ರಕ್ರಿಯೆ, ಅರ್ಜಿ ನಮೂನೆ, ಡಿ.ಡಿ ಮೊತ್ತ ಮತ್ತು ವೇತನ ಶ್ರೇಣಿ ಇತ್ಯಾದಿಗಳ ಬಗ್ಗೆ ಹಾಗೂ ಇನ್ನಿತರೆ ಹೆಚ್ಚಿನ ಮಾಹಿತಿಗಾಗಿ ಈ ಸಂಸ್ಥೆಯ ಅಂತರ್ಜಾಲ www.bmcri.orgನಲ್ಲಿ ಪರಿವೀಕ್ಷಿಸಬಹುದು. ಅರ್ಹ ಅಭ್ಯರ್ಥಿಗಳು ನಿಗಧಿತ ನಮೂನೆಯಲ್ಲಿ ಭರ್ತಿ ಮಾಡಿದ ಅರ್ಜಿಗಳೊಂದಿಗೆ ಎರಡು ಪಾಸ್‌ಪೋರ್ಟ್ ಅಳತೆಯ ಭಾವಚಿತ್ರ ಹಾಗೂ ದೃಢೀಕರಿಸಿದ ದಾಖಲಾತಿಗಳನ್ನು **"ನಿರ್ದೇಶಕರು ಹಾಗೂ ಡೀನ್, ಬೆಂಗಳೂರು ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆ, ಬೆಂಗಳೂರು"**ಇವರ ಹೆಸರಿನಲ್ಲಿ, ಎಲ್ಲಾ ಅಭ್ಯರ್ಥಿಗಳು ರೂ.1000/– ಗಳಿಗೆ ಪಡೆದ ಡಿ.ಡಿ.ಜೊತೆ ನೇರ ಸಂದರ್ಶನದ ದಿನದಂದು ಸಲ್ಲಿಸುವುದು.

ಸಹಿ/–
ನಿರ್ದೇಶಕರು ಹಾಗೂ ಡೀನ್,
ಬೆಂಗಳೂರು ವೈದ್ಯಕೀಯ ಮಹಾವಿದ್ಯಾಲಯ
ಮತ್ತು ಸಂಶೋಧನಾ ಸಂಸ್ಥೆ
ಬೆಂಗಳೂರು